ಚಿತ್ರದುರ್ಗ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳ ಬಗ್ಗೆ

1187 ಶ್ರೀ ಗೋಪಾಲಕೃಷ್ಣ ಎನ್.ವೈ. (ಮೊಲಕಾಲ್ಮೂರು) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಗೆ ಈವರೆವಿಗೂ ನೀಡಿರುವ ನ್ಯಾಯಬೆಲೆ ಅಂಗಡಿಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಅ) ಇದರಲ್ಲಿ ಈಗಾಗಲೇ ಸ್ಥಗಿತಗೊಂಡಿರುವ ನ್ಯಾಯಬೆಲೆ ಅಂಗಡಿಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಇ) ಈ ಸಾಲಿನಲ್ಲಿ ಜನಸಂಖ್ಯೆಗನುಗುಣವಾಗಿ ಹೊಸದಾಗಿ ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡುವ ವಿಚಾರ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರದ ಕ್ರಮಗಳೇನು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಚಿತ್ರದುರ್ಗ ಜಿಲ್ಲೆಗೆ ಈವರೆವಿಗೂ ನೀಡಿರುವ ನ್ಯಾಯ ಬೆಲೆ ಅಂಗಡಿಗಳ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು ಹೆಸರು	ನ್ಯಾಯಬೆಲೆ ಅಂಗಡಿಗಳ ಸಂಖ್ಯೆ
1	ಚಿತ್ರದುರ್ಗ	138
2	ಹೊಳಲ್ಕೆರೆ	91
3	ಹೊಸದುರ್ಗ	93
4	ಹಿರಿಯೂರು	88
5	ಚಳ್ಳಕೆರೆ	112
6	ಮೊಳಕಾಲ್ಮೂರು	44
	ಒಟ್ಟು	**566**

ಆ) ಸ್ಥಗಿತಗೊಂಡಿರುವ ನ್ಯಾಯಬೆಲೆ ಅಂಗಡಿಗಳ ತಾಲ್ಲೂಕುವಾರು ವಿವರ ಕೆಳಕಂಡಂತಿವೆ:

ಕ್ರ. ಸಂ.	ತಾಲ್ಲೂಕು ಹೆಸರು	ನ್ಯಾಯಬೆಲೆ ಅಂಗಡಿಗಳ ಸಂಖ್ಯೆ
1	ಚಿತ್ರದುರ್ಗ	1
2	ಹೊಳಲ್ಕೆರೆ	0
3	ಹೊಸದುರ್ಗ	1
4	ಹಿರಿಯೂರು	3
5	ಚಳ್ಳಕೆರೆ	3
6	ಮೊಳಕಾಲ್ಮೂರು	5
	ಒಟ್ಟು	**13**

ಇ) ಹೌದು.

ಈ) ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಈ ಹಿಂದೆ ತಾತ್ಕಾಲಿಕವಾಗಿ ತಡೆಹಿಡಿಯಲಾಗಿದ್ದ ಆದೇಶವನ್ನು ಹಿಂತೆಗೆದುಕೊಂಡು ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಆದೇಶ 1992ರ ಉಪಬಂಧಗಳನ್ವಯ ಹಾಗೂ ಈ ಸಂಬಂಧ ಹೊರಡಿಸಿರುವ ಸುತ್ತೋಲೆಗಳ ಮಾರ್ಗದರ್ಶನ ಗಳನ್ವಯ ಮಂಜೂರು ಪ್ರಕ್ರಿಯೆಯನ್ನು ಪ್ರಾರಂಭಿಸಲು ದಿನಾಂಕ 15–7–2009ರ ಸುತ್ತೋಲೆಯಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಶ್ರೀ ಎನ್.ವೈ. ಗೋಪಾಲಕೃಷ್ಣ: ಮಾನ್ಯ ಅಧ್ಯಕ್ಷರೇ, ಮಾನ್ಯ ಆಹಾರ ಮಂತ್ರಿಗಳು ಉತ್ತರವನ್ನು ಸಮರ್ಪಕವಾಗಿ ಕೊಟ್ಟಿದ್ದಾರೆ, ಬಹಳ ಸಂತೋಷ, ನಾನು ಮಾನ್ಯ ಮಂತ್ರಿಗಳಿಗೆ ಹಿಂದಿನ ಬಾರಿ ಒಂದು ಪ್ರಶ್ನೆಯನ್ನು ಕೇಳಿದ್ದೆನು. ಈಗಾಗಲೇ ಎಲ್ಲೆಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ಕೊಟ್ಟಿದ್ದೇವೆ, ಅದು 2001ರ ಸೆನ್ಸಸ್ ಪ್ರಕಾರ 300 ಜನಗಳಿಗೆ ಒಂದೊಂದು ನ್ಯಾಯಬೆಲೆ ಅಂಗಡಿಗಳನ್ನು ಮಾಡಿರುವುದು ನಿಜ. ಈಗ ಇತ್ತೀಚೆಗೆ ಜನಸಂಖ್ಯೆ ಕೂಡ ಜಾಸ್ತಿಯಾಗಿದ್ದು, ಆ ಜನಸಂಖ್ಯೆಗೆ ಅನುಗುಣವಾಗಿ ನ್ಯಾಯಬೆಲೆ ಅಂಗಡಿಗಳನ್ನು ಕೊಡುವಂತಹ ಕೆಲಸವಾಗಬೇಕು ಎಂದು ಕೇಳಿದ್ದೆನು. ಈಗಾಗಲೇ ಕಾರ್ಡುಗಳು ಜಾಸ್ತಿಯಾಗಿವೆ. ಒಂದು ಹಳ್ಳಿಯಲ್ಲಿ 350 ಕಾರ್ಡುಗಳು ಇರುವಂತಾದ್ದಕ್ಕೆ ನ್ಯಾಯ ಬೆಲೆ ಅಂಗಡಿಯನ್ನು ಕೊಟ್ಟಿದ್ದೀರಿ, ಅದೇ ಹಳ್ಳಿಯಲ್ಲಿ ಸಾವರಾರು

ಕಾರ್ಡುಗಳನ್ನು ಇಟ್ಟುಕೊಂಡಿರುವುದು ತಮಗೆ ಗೊತ್ತಿದೆ. ಈಗ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ನಾನು ತಮಗೆ ಹಿಂದೆ ಒಂದು ಪ್ರಶ್ನೆಯನ್ನು ಕೇಳಿದ್ದೆನು. ತಾವು ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಸರ್ಕಾರಕ್ಕೆ ಆದೇಶ ಕೊಟ್ಟಿದ್ದಿರಿ, ಆ ಸಂಬಂಧವಾಗಿ ನಿಮ್ಮ Commissioner ನಿಂದ ಸದ್ಯಕ್ಕೆ ನಾವು ಅದನ್ನು ಸ್ಥಗಿತ ಮಾಡಿದ್ದೇವೆ, ನಾವು ಹೊಸದಾಗಿ ಕೊಡುವಂತಹ ನ್ಯಾಯಬೆಲೆ ಅಂಗಡಿಗಳಿಗೆ ಮುಂದೆ ನಾವು ಪ್ರಕ್ರಿಯೆ ಪ್ರಾರಂಭಿಸುತ್ತೇವೆ" ಎಂದು ಒಂದು circular issue ಆಗುತ್ತದೆ. ಅದರಂತೆ ತಾವು ದಿನಾಂಕ 15–7–2009ಕ್ಕೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಇಲ್ಲಿಂದ ನಾವು ಮಾಹಿತಿ ಕೊಟ್ಟಿದ್ದೇವೆಂದು ತಾವು ಉತ್ತರದಲ್ಲಿ ಹೇಳಿದ್ದು, ಅದು ನಿಜವೋ ಇಲ್ಲವೋ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಎರಡನೆಯದಾಗಿ ಎಲ್ಲೆಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟಿದ್ದಿರಿ, ಸ್ಥಗಿತವಾಗಿರುವಂತಹ ನ್ಯಾಯಬೆಲೆ ಅಂಗಡಿಗಳಿಗೆ ಪಕ್ಕದಲ್ಲಿರುವಂತಹ ಗ್ರಾಮಗಳಿಂದ ಸಮರ್ಪಕವಾಗಿ ಆಹಾರ ಧಾನ್ಯಗಳು ಪೂರೈಕೆಯಾಗಬೇಕು ಎನ್ನುವ ದೃಷ್ಟಿಯಿಂದ ಕೇಳಿದ್ದೆವು, ಅದಕ್ಕೂ ಕೂಡ ನನಗೆ ಸರಿಯಾದ ಉತ್ತರ ಬರಲಿಲ್ಲ. ಈಗ ಇಲ್ಲಿ ಸ್ಥಗಿತಗೊಂಡಿರುವಂತಹ ನ್ಯಾಯಬೆಲೆ ಅಂಗಡಿಗಳು ಏನಿವೆ, ಅದರ ಬಗ್ಗೆ ಎಷ್ಟು ಬೇಗ ತೀರ್ಮಾನ ತೆಗೆದುಕೊಂಡು ವ್ಯವಸ್ಥೆಗೆ ತರುತ್ತೀರಿ ಎನ್ನುವುದು ಒಂದು ವಿಚಾರ. ಮೂರನೆಯದಾಗಿ ಚಿತ್ರದುರ್ಗ ಜಿಲ್ಲೆಗೆ, ಇದು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ, ಇಡೀ ರಾಜ್ಯಕ್ಕೆ ಸೀಮಿತವಾಗಿರುವಂತಹ ಪ್ರಶ್ನೆಯಾಗಿರುವುದರಿಂದ ಇನ್ನು ಎಷ್ಟು ದಿವಸಗಳಲ್ಲಿ ಈ ಪ್ರಕ್ರಿಯೆ ಪ್ರಾರಂಭ ಮಾಡುತ್ತೀರಿ ಎನ್ನುವುದು ಒಂದು ಪ್ರಶ್ನೆ. ಈಗಾಗಲೇ ನ್ಯಾಯಬೆಲೆ ಅಂಗಡಿಗಳಲ್ಲಿ ನೂರಕ್ಕೆ 40 ರಿಂದ 50 ಭಾಗದಷ್ಟು ಅಸಮರ್ಪಕವಾಗಿ withheld ಆಗುವಂತಹ ವಿಚಾರ ತಮಗೆ ಗೊತ್ತಿದೆ. ಅದರ ವಿಚಾರದಲ್ಲಿ, ತಾವು ಸರಿ ಹೊಂದಾಣಿಕೆಯಾಗುವಂತಹ ಕೆಲಸವನ್ನು ಮಾಡಬೇಕೆಂದರೆ, ಅದಕ್ಕೆ ಒಂದು ಪ್ರಾಧಿಕಾರ ಎಂದು ತಾವು ರಚನೆ ಮಾಡಿದರೆ ಅದಕ್ಕೆ ನಾವು complant ಮಾಡಬೇಕು. ಅದನ್ನು ಪ್ರಾಧಿಕಾರದವರು ಕೂಲಂಕುಷವಾಗಿ ಪರಿಶೀಲಿಸಿ ಕ್ರಮವನ್ನು ಕೈಗೊಳ್ಳಬೇಕು ಎನ್ನುವ ವ್ಯವಸ್ಥೆ ತಮ್ಮಲ್ಲಿ ಇದೆ. ಆದರೆ ಯಾವ ಪ್ರಾಧಿಕಾರದವರು ಕೂಡ ಯಾವ ವಿಚಾರದಲ್ಲಿ ಕೂಡ ಅದಕ್ಕೆ ಪರಿಹಾರ ಕೊಡುವಂತಹ ವ್ಯವಸ್ಥೆ ಇಲ್ಲಿ ಆಗಿಲ್ಲ. ಬೇರೆ ವಿಚಾರಗಳಲ್ಲಿ Vigilance Committee, Task Force Committee ಎಂದು

ತಾವು ಮಾಡಿದ್ದೀರಿ. ಆದರೆ ಈ ಆಹಾರ ಪೂರೈಕೆ ವಿಚಾರದಲ್ಲಿ ಕೂಡ ಇಲ್ಲಿಯವರೆಗೆ ಯಾವುದೇ Vigilance ಕಮಿಟಿಯನ್ನಾಗಲೀ ಅಥವಾ Task Force ಸಮಿತಿಯಾಗಲಿ ಮಾಡಿರಲಿಲ್ಲ. ಉದಾಹರಣೆಗೆ ಆಶ್ರಯ ಸಮಿತಿಯಲ್ಲಾಗಲಿ, ಕುಡಿಯುವ ನೀರಿನ ವ್ಯವಸ್ಥೆಗೆ ಆಗಲಿ ಎಲ್ಲಾ ಕಮಿಟಿಗಳಲ್ಲಿ ಕೂಡ ಶಾಸಕರು ಅಧ್ಯಕ್ಷರಾಗಿ ಸೂಪರ್‌ವೈಸ್ ಮಾಡಬೇಕು ಎಂದು ತಾವು ಮಾಡಿದಿರಿ. ಪ್ರತಿಯೊಂದು ವಿಚಾರದಲ್ಲಿ ಸರ್ಕಾರವನ್ನು ತಲೆದಂಡ ಮಾಡುವುದಕ್ಕೆ ಆಗುವುದಿಲ್ಲ, ತಲೆ ಕೊಡುವುದಕ್ಕೂ ಆಗುವುದಿಲ್ಲ. ನಿಮಗೆ ಆ ಹೊರೆಯನ್ನು ಹೊರುವುದಕ್ಕೆ ಆಗುವುದಿಲ್ಲ. ಹೀಗಾಗಿ ಆ ಕ್ಷೇತ್ರದಲ್ಲಿರುವಂತಹ ಎಲ್ಲಾ ಶಾಸಕರನ್ನು ಆ Task Force ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿ, ಅವರ ನೇತೃತ್ವದಲ್ಲಿ ಅಧಿಕಾರಿಗಳ ಸಹಕಾರದಿಂದ ಈಗ ಆಗುತ್ತಿರುವಂತಹ ಅನಾಹುತಗಳನ್ನು ತಪ್ಪಿಸುವಂತಹ ಕೆಲಸಗಳನ್ನು ಮಾಡುವುದಕ್ಕಾಗುತ್ತದೆಯೇ ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ನಾನು ಈ ಪ್ರಶ್ನೆಯನ್ನು ತಮಗೆ ಕೇಳುತ್ತಿದ್ದೇನೆ. ಅದಕ್ಕೆ ತಾವು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಹೆಚ್. ಹಾಲಪ್ಪ: ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರು ಹೇಳಿದ ಹಾಗೆ ಅವರ ಜಿಲ್ಲೆಯಲ್ಲಿ ಸ್ಥಗಿತಗೊಂಡಿರುವಂತಹ ನ್ಯಾಯ ಬೆಲೆ ಅಂಗಡಿಗಳು ಏನಿವೆ, ಅದನ್ನು ಪಕ್ಕದ ಹಳ್ಳಿ ಅಥವಾ ಪಕ್ಕದ ನ್ಯಾಯಬೆಲೆ ಅಂಗಡಿ ಏನಿರುತ್ತದೆ ಅಲ್ಲಿಗೆ ತಾತ್ಕಾಲಿಕವಾಗಿ ನಾವು ವಹಿಸಿರುತ್ತೇವೆ. ಇವರು ಹೊಸ ಅಂಗಡಿಗಳನ್ನು ಆದಷ್ಟು ಬೇಗ ಮಾಡಿ ಎಂದು ಹೇಳಿದ್ದಾರೆ. ಅಂಗಡಿಗಳು ಎಲ್ಲೆಲ್ಲಿ ಅಗತ್ಯ ಇದೆ ಅದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುತ್ತೇವೆ. ನಾನು ಎಲ್ಲಾ ಸದಸ್ಯರಿಗೆ ವಿನಂತಿ ಮಾಡುವುದು ಇಷ್ಟೇ, ಎಲ್ಲೆಲ್ಲಿ ಅಗತ್ಯ ಇದೆ, ಎಲ್ಲೆಲ್ಲಿ 700, 800 ರಿಂದ ಸಾವಿರ ಕಾರ್ಡುಗಳವರೆಗೆ ಇವೆ, ಅಂತಹ ಕಡೆ ತಾವು ಪ್ರಪೋಸಲ್ ಕಳುಹಿಸಿ ಕೊಟ್ಟರೆ ಅದನ್ನು ಕೂಡಲೇ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ. ಇನ್ನೊಂದು ವಿಚಾರ ಇಲ್ಲಿ ಬಹಳಷ್ಟು ಅವ್ಯವಹಾರಗಳು ಬಹಳಷ್ಟು ನಡೆಯುತ್ತವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆ ಇದೆ, ಆ ಸಂದರ್ಭದಲ್ಲಿ ಇದರ ಬಗ್ಗೆ detail ಆಗಿ ಉತ್ತರವನ್ನು ಹೇಳಬಹುದೆಂದು ಕಾಣಿಸುತ್ತದೆ. ಇನ್ನೊಂದು ವಿಷಯ taskforce ಮಾಡಿಯೆಂದು ಹೇಳಿದ್ದಾರೆ. ಅದನ್ನು ಕೂಡ ಮಾನ್ಯ ಶಾಸಕ ಮಿತ್ರರು ಹೋಗಿ check ಮಾಡಬಹುದು. ಆ ರೀತಿ check ಮಾಡಬೇಕೆಂದು ನಾನು ಕೂಡ ವಿನಂತಿ ಮಾಡುತ್ತೇನೆ. ಆಗ ಈ ಅವ್ಯವಹಾರಗಳು ಇನ್ನಷ್ಟು controlಗೆ ಬರುತ್ತದೆಂದು ಹೇಳುತ್ತೇನೆ. ಈಗಾಗಲೇ

ಜಾಗೃತ ಸಮಿತಿಗಳೆಂದು ಇದೆ. ಪ್ರತಿ ನ್ಯಾಯಬೆಲೆ ಅಂಗಡಿಗಳಲ್ಲಿ 7 ಜನ ಸದಸ್ಯರು card holders ಇರುವಂಥವರು ಸಭೆಯನ್ನು ಮಾಡಬೇಕು. ಅವರು ಆಗಾಗ ಹೋಗಿ check ಮಾಡಬೇಕು. ನಮ್ಮ KDP ಸಭೆಯಲ್ಲೂ ಇದರ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಬೇಕೆಂದು ನಾನು ಎಲ್ಲಾ ಸದಸ್ಯರಲ್ಲೂ ವಿನಂತಿ ಮಾಡುತ್ತೇನೆ. ಆಗ ನನ್ನ ಕೆಲಸವನ್ನು ಮಾಡುವುದಕ್ಕೆ ಹೆಚ್ಚು ಶಕ್ತಿ ಬರುತ್ತದೆಂದು ನಾನು ವಿನಂತಿ ಮಾಡುತ್ತೇನೆ. ಈಗ ಆಗುತ್ತಿರುವಂಥ ಅವ್ಯವಹಾರಗಳಿಗೆ ತಡೆ ಹಾಕಬೇಕು. ಅದಕ್ಕೆ ಸರ್ಕಾರ ಬದ್ಧವಾಗಿದೆ, ಈ ಸದನದಲ್ಲಿರುವಂಥ ಎಲ್ಲಾ ಸದಸ್ಯರು ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಚಾರವೆನೆಂದರೆ ನೀವು ಕುಡಿಯುವ ನೀರಿನ ವಿಚಾರದಲ್ಲಿ Taskforce Committee ಯನ್ನು ಮಾಡಿ, ಶಾಸಕರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡುತ್ತೀರಿ. ಈ MMzÀ ಬರುವಂಥಾದ್ದರಲ್ಲಿ allotmentನಲ್ಲಿ ಹೆಚ್ಚು ಕಡಿಮೆಯಾಗುತ್ತದೆ, ವಿತರಣೆ ಮಾಡುವುದರಲ್ಲಿ ಲೋಪವಾಗುತ್ತದೆ. ಇದೆಲ್ಲವನ್ನು monitor ಮಾಡುವುದಕ್ಕೆ, ನಾನು ಸತ್ಯ ಹೇಳಬೇಕೆಂದರೆ ಯಾವಾಗ food ಬರುತ್ತದೆ, ಯಾವಾಗ ಕೊಡುತ್ತಾರೆಂಬುದು ಯಾರಿಗೂ ಗೊತ್ತಾಗುವುದಿಲ್ಲ. ನಾವು ಪ್ರತಿ KDP ಸಭೆಯಲ್ಲೂ ಹೇಳುತ್ತೇವೆ. ನೀವು local paperಗೆ ಹೇಳಿ, ಸೀಮೆ ಎಣ್ಣೆಯನ್ನು ಎಷ್ಟು ಕೊಡುತ್ತೀರಿ. ನಾಲ್ಕು ಲೀಟರ್ ಕೊಡುತ್ತಿರಾ, 3 ಲೀಟರ್ ಕೊಡುತ್ತೀರಾ? ಯಾರ್ಯಾರಿಗೆ ಎಷ್ಟೆಷ್ಟು ಲೀಟರ್ ಸೀಮೆ ಎಣ್ಣೆ ಕೊಡುತ್ತೇವೆಂಬುದನ್ನು ಹೇಳುತ್ತೇವೆ. ಒಬ್ಬ ತಹಶೀಲ್ದಾರರು ಯಾವತ್ತು ಈ ಕೆಲಸವನ್ನು ಮಾಡುವುದಿಲ್ಲ. ಏಕೆಂದರೆ ಅದು ಅವರ convenience, ತಹಶೀಲ್ದಾರರು ಇವರೆಲ್ಲಾ ಒಂದು understanding ಮೇಲೆ ಇರುತ್ತಾರೆ. ಅದಕ್ಕೋಸ್ಕರ ಮಾನ್ಯ ಸದಸ್ಯರು ನೀಡಿದ ಸಲಹೆ ಸೂಕ್ತವಾಗಿದೆ, ದಯಮಾಡಿ ತಾವು ಮತ್ತೊಮ್ಮೆ ಇದರ ಬಗ್ಗೆ ಯೋಚನೆ ಮಾಡಿ. ಶಾಸಕರ ಅಧ್ಯಕ್ಷತೆಯಲ್ಲಿ ಒಂದು taskforce ಎಂದು ಮಾಡಿ. ಎಲ್ಲಿಗೆ ಎಷ್ಟು food ಹೋಯಿತೆಂಬ ಮಾಹಿತಿಯಾದರೂ ಬರುತ್ತದೆ, ಇಲ್ಲವೆಂದರೆ ಗೊತ್ತಾಗುವುದಿಲ್ಲ. ದಯಮಾಡಿ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆ ಸೂಕ್ತವಾಗಿದೆ, ಅದನ್ನು ಮಾಡಬಹುದು. ಅದನ್ನು ಮಾಡಿ ನಿಮಗೆ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದು ಬಹಳ ಸೂಕ್ತವಾಗಿದೆ. ಮಾನ್ಯ ಸಚಿವರು

ಈಗ ಉತ್ತರವನ್ನು ಕೊಡುತ್ತಾ ಒಂದು ಮಾತನ್ನು ಹೇಳಿದರು. ಈಗ ಶಾಸಕರು ಹೋಗಿ check ಮಾಡಬಹುದೆಂದು ಹೇಳಿದರು. ನಾವು ಜನ ಸ್ಪಂದನ ಸಭೆಯಲ್ಲೂ check ಮಾಡುತ್ತೇವೆ, KDPಯಲ್ಲೂ check ಮಾಡುತ್ತೇವೆ. ಅಲ್ಲಿ ನ್ಯಾಯಬೆಲೆ ಅಂಗಡಿಗಳ ಮಾಲೀಕರು MLAಗಳನ್ನು ಗೆಲ್ಲಿಸುವವರು, ಸೋಲಿಸುವವರು ಅವರೇ ಆಗಿದ್ದಾರೆ. ಅವರು ಬಹಳ ಪ್ರಭಾವಿ ವ್ಯಕ್ತಿಗಳಾಗಿದ್ದಾರೆ. ಅಂಥ ಸಂದರ್ಭದಲ್ಲಿ ಕಾನೂನಿನ ಚೌಕಟ್ಟಿಲ್ಲದೇ ಜನರಿಗೆ ಬಹಳ ಪ್ರಮಾಣದಲ್ಲಿ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಿಜವಾಗಿಯೂ ಸರ್ಕಾರ ತೆಗೆದುಕೊಂಡಿರುವ ಈ ಕಾರ್ಯಕ್ರಮ ಒಳ್ಳೆಯ ಕಾರ್ಯಕ್ರಮ ಮತ್ತು ಒಳ್ಳೆಯ ಹೆಸರು ಬರುವಂಥ ಕಾರ್ಯಕ್ರಮವಾಗಿದೆ. ಅದರಲ್ಲೂ ಜನರಿಗೆ ಮೂಲಭೂತವಾಗಿ ಅವರಿಗೆ ಕೊಡತಕ್ಕಂಥ ಸವಲತ್ತಿನಲ್ಲಿ ಬಹಳ ಪ್ರಾಮಾಣಿಕವಾದಂಥಾದ್ದು.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ತಾವು suggestion ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅದರೆ ಇಂಥ ಒಂದು ಕಾರ್ಯಕ್ರಮದಲ್ಲಿ ನೇರವಾಗಿ ಅವ್ಯವಹಾರ ನಡೆಯುತ್ತಿದೆ. ಇಲ್ಲಿ ನಾಲ್ಕು ಲೀಟರ್ ಸೀಮೆಎಣ್ಣೆಯನ್ನು ಕೊಡಬೇಕೆಂದರೆ ಎರಡು ಲೀಟರ್ ಸೀಮೆ ಎಣ್ಣೆಯನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು: ಈಗ Question Hour ತಾವು specific ಆಗಿ suggestion ಮಾಡುವುದಾದರೆ ಮಾಡಿ. ನೀವು ಇದನ್ನು ಬೇಡಿಕೆಗಳ ಮೇಲೆ ಮಾತನಾಡುವಾಗ ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಇದರಲ್ಲಿ ಅವ್ಯವಹಾರ ನಡೆಯುತ್ತಿದೆ. ತಾವು ದಯವಿಟ್ಟು task force committee ಯನ್ನು ಮಾಡಿ, ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಶಾಸಕರಿಗೆ ಅಧಿಕಾರವನ್ನು ಕೊಡಿ, ಜಿಲ್ಲಾ ಪಂಚಾಯತ್ ಮೆಂಬರ್‌ಗಳನ್ನು ಹಾಕಿ. ಎಲ್ಲರನ್ನೂ ಹಾಕಿ ಒಂದು taskforce committee ಯನ್ನು ಮಾಡಿಕೊಡಿ.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ನ್ಯಾಯಬೆಲೆ ಅಂಗಡಿಗಳಲ್ಲಿ ಆಗುವ ಅವ್ಯವಹಾರಗಳನ್ನು ಸಮರ್ಪಕವಾಗಿ ಮಾಡುವುದಕ್ಕೆ ಎಲ್ಲಾ ration shopಗಳನ್ನು e-Governance ಮುಖಾಂತರ Computerization ಮಾಡಿದರೆ ಬಹಳಷ್ಟು ಪ್ರಯೋಜನವಾಗುತ್ತದೆ, ಮತ್ತು transparency ಕೂಡ ಆಗುತ್ತದೆ. ಜನರಿಗೆ ಯಾವ ತಾರೀಖಿನಲ್ಲಿ ಎಷ್ಟು ಆಹಾರ ಬಂದಿದೆ ಎಂಬುದು

ಗೊತ್ತಾಗುತ್ತದೆ. ಆದುದರಿಂದ ಎಲ್ಲಾ fare price shopಗಳನ್ನು computerization ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈ ವಿಷಯಕ್ಕೆ ಅರ್ಧ ಗಂಟೆ ಚರ್ಚೆ ಮಾಡಲು ಸೋಮವಾರ ಅವಕಾಶ ಕೊಡುತ್ತೇನೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ: ಮಾನ್ಯ ಅಧ್ಯಕ್ಷರೆ, ಹೊಸ ನ್ಯಾಯಬೆಲೆ ಅಂಗಡಿಗೆ ಆದೇಶ ಕೊಡಿ.

ಅಧ್ಯಕ್ಷರು: ಮಾನ್ಯ ರುದ್ರೇಶ್‌ಗೌಡರೆ, ಎಲ್ಲಾ ಪ್ರಶ್ನೆಯನ್ನು ಕೇಳುವುದು ಬೇಡ.

ಶ್ರೀ ವೈ.ಎನ್. ರುದ್ರೇಶ್‌ಗೌಡ: ನೀವು ಎಲ್ಲವನ್ನು ಸ್ಥಗಿತಗೊಳಿಸಿದ್ದೇವೆಂದು ಹೇಳುತ್ತೀರಿ. ಕಳೆದ ಎರಡೂವರೆ ವರ್ಷಗಳಿಂದ ಪೆಂಡಿಂಗ್ ಇದೆ. ಮಾನ್ಯ ಮಂತ್ರಿಯವರು ಅರ್ಥ ಮಾಡಿಕೊಳ್ಳಬೇಕು. ಹೊಸ ನ್ಯಾಯಬೆಲೆ ಅಂಗಡಿಗಳ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ communicate ಮಾಡಿ. ಇದನ್ನು ಮುಚ್ಚಿ ಇಡಬೇಡಿ, ಸ್ಪಷ್ಟ ಆದೇಶವನ್ನು ಕೊಡಿ. ಹೊಸ ನ್ಯಾಯಬೆಲೆ ಅಂಗಡಿಗಳನ್ನು ಕೊಡುವುದಕ್ಕೆ ಎರಡೂವರೆ ವರ್ಷಗಳಿಂದ ಅರ್ಜಿಗಳು ಪೆಂಡಿಂಗ್ ಇದೆ. ಇದನ್ನು ಸರಿಪಡಿಸಿ.

ಶ್ರೀ ಎಂ.ಟಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಬಹಳಷ್ಟು ಕಡೆ 700, 800, 1000 ಕಾರ್ಡ್‌ಗಳು ಆಗಿವೆ. ದಯಮಾಡಿ equal ಆಗಿ bifurcation ಮಾಡುವುದಕ್ಕೆ DC ಯವರಿಗೆ ಅಧಿಕಾರ ಕೊಡಬೇಕು. ಜೊತೆಗೆ taskforce ಮಾಡುವ ಮುಖಾಂತರ ಕಾಳಸಂತೆಯಲ್ಲಿ ಆಹಾರವನ್ನು ಏನು ವ್ಯಾಪಾರ ಮಾಡುತ್ತಾರಲ್ಲಾ, ಅಕ್ಕಿ ಮಾರುವಂಥಾದ್ದು ಈಗ 3 ರೂ.ಗಳಿಗೆ ಒಳ್ಳೆಯ ಅಕ್ಕಿಯನ್ನು ಕೊಡುತ್ತಿದ್ದೀರಿ. ಅದರೆ ಫಲಾನುಭವಿಗಳಿಗೆ ಇದು ಸಿಗುವುದಿಲ್ಲ. ಇದು ಕಾಳಸಂತೆಯಲ್ಲಿ ಮಾರಾಟವಾಗುತ್ತದೆ. ರಾತ್ರಿ ಹೊತ್ತು ಈ ಲೋಡ್ ಬರುತ್ತದೆ, ಇದು ಬೆಳಗಿನ ವೇಳೆಯಲ್ಲಿ ಬರುವುದಿಲ್ಲ. ಇದನ್ನೆಲ್ಲಾ ಸುಸ್ಥಿತಿಗೆ ತರಬೇಕಾದರೆ ಶಾಸಕರ taskforce committee ಯನ್ನು ಮಾಡಿದರೆ ಇದರಿಂದ ಸ್ವಲ್ಪ ಭಯವಿರುತ್ತದೆ.

ಅಧ್ಯಕ್ಷರು: ಈಗ ಎಲ್ಲರೂ ಮಾತನಾಡುವುದಕ್ಕೆ ಶುರು ಮಾಡುತ್ತಾರೆ. ಈಗ ಸಾಕು, ಸೋಮವಾರ ಅರ್ಧ ಗಂಟೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಸುಭಾಷ್ ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ಎರಡೆರಡು ಹಳ್ಳಿಗಳಿಗೆ ಒಂದು ರೇಷನ್ ಅಂಗಡಿ ಇದೆ. ಅವರು ಆ ಹಳ್ಳಿಗೆ ಹೋಗಿ ರೇಷನ್ ತರಬೇಕೆಂದರೆ ಒಂದು ದಿವಸವಾಗುತ್ತದೆ.

ಅಧ್ಯಕ್ಷರು: ಎಲ್ಲರಿಗೂ ಸೋಮವಾರ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಈಗ ಮಾನ್ಯ ಮಂತ್ರಿಗಳೆ, ತಾವು ಉತ್ತರವನ್ನು ಕೊಡಿ. ಈ ಪ್ರಶ್ನೆಗೆ ಕೊನೆಯೇ ಇಲ್ಲ. ನೀವು ಜಿಲ್ಲಾವಾರು ಶಾಸಕರ ಒಂದು ಸಭೆ ಕರೆದು ಬಿಡಿ. ಇಲ್ಲಿ ಆಹಾರ ಮತ್ತು ರೇಷನ್ ಕಾರ್ಡ್ ವಿಷಯ ಬಂದರೆ discussionಗೆ ಕೊನೆಯೇ ಇಲ್ಲ. ಎಲ್ಲಾ ಶಾಸಕರುಗಳ ಒಂದು ಪ್ರತ್ಯೇಕ ಸಭೆಯನ್ನು ಕರೆದುಬಿಡಿ.

ಶ್ರೀ ಸುಭಾಷ್ ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ಎರಡೆರಡು ಹಳ್ಳಿಗಳಿಗೆ ಒಂದು ರೇಷನ್ ಶಾಪ್ ಇದೆ.

ಅಧ್ಯಕ್ಷರು: ನಾನು ಸೋಮವಾರ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡುತ್ತೇನೆ. ತಾವುಗಳು ಬೇಕಾದರೆ ಒಂದು ಗಂಟೆ ಕಾಲ ಚರ್ಚೆ ಮಾಡಿ. ಆಗ ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ. ಈಗ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಹೆಚ್. ಹಾಲಪ್ಪ: ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಗೋಪಾಲಕೃಷ್ಣರವರು ಮತ್ತು ಎಲ್ಲಾ ಸದಸ್ಯರು ಏನು ಹೇಳಿದ್ದಾರೆಂದರೆ ಹೊಸ ನ್ಯಾಯಬೆಲೆ ಅಂಗಡಿಯನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಡಿಯೆಂದು ಹೇಳಿದ್ದಾರೆ. ಅದಕ್ಕೆ ನಾವು ಈಗಾಗಲೇ ದಿನಾಂಕ 15–7–2009ರಂದು ಆದೇಶವನ್ನು ಮಾಡಿದ್ದೇವೆ. ಹೊಸ ನ್ಯಾಯ ಬೆಲೆ ಅಂಗಡಿಗಳು ಎಲ್ಲೆಲ್ಲಿ ಅಗತ್ಯವಿದೆ, ಅಲ್ಲಿ ನ್ಯಾಯ ಬೆಲೆ ತೆಗೆಯುವುದಕ್ಕೆ ಅವಕಾಶವಿದೆ. ಅದು ಆದ ನಂತರ ಹಿರಿಯ ಸದಸ್ಯರು ಮತ್ತು ಉಪ ನಾಯಕರು ಹಾಗೂ ಇದೇ ಖಾತೆಯಲ್ಲಿ ಮಂತ್ರಿಯಾಗಿ ಕಾರ್ಯನಿರ್ವಹಿಸಿದಂಥವರು ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ.

ಶ್ರೀ ನೆಹರು ಓಲೇಕಾರ್ ಚನ್ನಬಸಪ್ಪ: ಮಾನ್ಯ ಅಧ್ಯಕ್ಷರೆ, ಪ್ರತಿ ಹಳ್ಳಿಗೆ ಒಂದೊಂದು ರೇಷನ್ ಅಂಗಡಿಯನ್ನು ಕೊಟ್ಟರೆ ಅನುಕೂಲವಾಗುತ್ತದೆ. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುವುದಕ್ಕೆ ಸಮಸ್ಯೆಯಾಗುತ್ತದೆ.

ಅಧ್ಯಕ್ಷರು: ಮಾನ್ಯ ನೆಹರು ಒಲೆಕಾರ್‌ರವರೆ, ಈ ಪ್ರಶ್ನೆಯನ್ನು close ಮಾಡಿದ್ದೇನೆ. ಈ ವಿಷಯವನ್ನು ಚರ್ಚೆ ಮಾಡಲು ಸೋಮವಾರ ಅವಕಾಶ ಕೊಡುತ್ತೇನೆ.

ಬಿಜಾಪುರ ನಗರದಲ್ಲಿ ಅಂಗನವಾಡಿ ಮತ್ತು ಮಿನಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ

1233 ಶ್ರೀ ಅಪ್ಪಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರದಲ್ಲಿರುವ ಅಂಗನವಾಡಿ ಕೇಂದ್ರಗಳು ಹಾಗೂ ಮಿನಿ ಅಂಗನವಾಡಿ ಕೇಂದ್ರಗಳೆಷ್ಟು; (ಪ್ರದೇಶವಾರು ವಿವರ ನೀಡುವುದು)

ಆ) ಕಳೆದ ಮೂರು ವರ್ಷದಿಂದ ಬಿಜಾಪುರ ನಗರಕ್ಕೆ ಮಂಜೂರಾದ ಅಂಗನವಾಡಿ ಕೇಂದ್ರಗಳು ಹಾಗೂ ಮಿನಿ ಅಂಗನವಾಡಿ ಕೇಂದ್ರಗಳೆಷ್ಟು; ಅವು ಯಾವುವು;

ಇ) ಈ ನಗರಕ್ಕೆ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಹಾಗೂ ಮಿನಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಸರ್ಕಾರದ ಮಯದಿದೆಯೆ;

ಈ) ಹಾಗಿದ್ದಲ್ಲಿ, ಹೊಸದಾಗಿ ಎಷ್ಟು ಅಂಗನವಾಡಿ ಹಾಗೂ ಮಿನಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗುವುದು; ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಬಿಜಾಪುರ ನಗರದಲ್ಲಿ ಅಂಗನವಾಡಿ ಕೇಂದ್ರಗಳು ಹಾಗೂ ಮಿನಿ ಅಂಗನವಾಡಿ ಕೇಂದ್ರಗಳು ಇರುವುದಿಲ್ಲ.

ಆ) ಕಳೆದ ಮೂರು ವರ್ಷದಿಂದ ಬಿಜಾಪುರ ನಗರಕ್ಕೆ ಅಂಗನವಾಡಿ ಕೇಂದ್ರಗಳು ಹಾಗೂ ಮಿನಿ ಅಂಗನವಾಡಿ ಕೇಂದ್ರಗಳು ಮಂಜೂರಾಗಿರುವುದಿಲ್ಲ.

ಇ) ಹೌದು.

ಈ) 193 ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಕೋರಿದ್ದು ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ. 2009–10ನೇ ಸಾಲಿನಲ್ಲಿ ಬಿಜಾಪುರ ತಾಲ್ಲೂಕಿಗೆ 104 ಹೊಸ ಅಂಗನವಾಡಿ ಕೇಂದ್ರಗಳು